ಶ್ರೀ ಟಿ. ಎನ್. ಮಾದಪ್ಪಗೌಡ.—ಈಗಲಾದರೂ ಸರ್ಕಾರ ಅರಮನೆಯವರಿಗೆ ಹೇಳಿ ಒಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಪ್ರೈವೇಟು ಪ್ರಾಪರ್ಟಿ. ಇದು ವ ಹಾರಾಜರಿಗೆ ಗೊತ್ತೋ ಇಲ್ಲವೋ, ಅವರ ಕೈಕೆಳಗಿನ ಅಧಿಕಾರಿಗಳು ಮಾಡಿರುವ ಕೆಲಸ ಇದರ ಬಗ್ಗೆ ನಾವು ಬೇಕಾದರೆ ಬರಿಯುತ್ತೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಈಗ ಉಳಿದಿರುವ ಜಮೀನಿಗಾದರೂ ನೀರನ್ನು ಕೊಡುವುದರ ಕಡೆಗೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆರೆ ಅಂಗಳ ಕೊಡುವಾಗ ಸರ್ವೆಮರ್ಷನ್ನು ಆಗಿರುವುದು ಇಷ್ಟು ಇಲ್ಲದೇ ಇರುವುದು ಇಷ್ಟು ಎನ್ನುವ ಲೆಕ್ಕ ಇರಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆರೆಯ ಅರ್ಧ ಭಾಗವೆಲ್ಲಾ ಅರಮನೆಯ ಹಳ್ಳಿಗೆ ಸೇರಿದ್ದು ಅಲ್ಲದೆ ಇವೆಲ್ಲಾ ಪ್ಯಾಲೇಸು ಲ್ಯಾಂಡ್ಸ್‌ಗಳು ಎಂದು ಅವರೇ ಮಾರಿಬಿಟ್ಟಿದ್ದಾರೆ. ಈಗ ಇದನ್ನು ಸರಕಾರ ಅಕ್ವೈರ್ ಮಾಡಿಕೊಳ್ಳಬೇಕೆಂದರೆ ಸಾವಿರಾರು ರೂಪಾಯಿಗಳಷ್ಟು ಹಣ ಕೊಡಬೇಕಾಗಿ ಬರುತ್ತದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ನಾಗಮಂಗಲದ ತಾಲ್ಲೂಕು ಬರಗಾಲಕ್ಕೆ ಪ್ರಸಿದ್ಧವಾದ ತಾಲ್ಲೂಕು. ಇಂತಹ ಕಡೆಗಳಲ್ಲಿರುವ ಅಚ್ಚುಕಟ್ಟುದಾರರಿಗೆ ನೀರಿಲ್ಲದೆ ಬಹಳ ತೊಂದರೆಯಾಗುತ್ತಿರುವುದರಿಂದ ನೀರಿನ ಸೌಕರ್ಯವನ್ನು ಈಗಲಾದರೂ ತಕ್ಷಣ ಒದಗಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರಕಾರ ಇಲ್ಲಿರುವ ಅಚ್ಚುಕಟ್ಟುದಾರರಿಗೆ ಅನುಕೂಲ ಮಾಡಬೇಕೆಂದು ಈಗಾಗಲೇ ಸುಮಾರು 2,90,000 ರೂಪಾಯಿಗಳ ಒಂದು ಎಸ್ಟಿಮೇಟನ್ನು ತಯಾರು ಮಾಡಲಾಗಿತ್ತು. ಆದರೆ ಇದನ್ನು ಪುನಃ ಪರಿಶೀಲನೆ ಮಾಡುವಾಗ ಇದರ ಖರ್ಚು ಜಾಸ್ತಿಯಾಗುತ್ತದೆ ಮತ್ತು un-economic ಆಗುತ್ತದೆ ಎಂದು ಎಲ್ಲೆಲ್ಲಿ ಈಗ waste weirs, sluices, channels ಇವೆಯೋ ಅವುಗಳನ್ನು ರಿಪೇರಿ ಮಾಡಿಸಿ ಸುಮಾರು 50 ಎಕರೆಗಳಷ್ಟು ಭೂಮಿಗೆ ನೀರನ್ನು ಕೊಡಬೇಕೆಂದಿದೆ. ಇನ್ನೂ ಯೋಚನೆ ಮಾಡುತ್ತಿದ್ದೇವೆ.

Extent of land granted to the Scheduled Class people in Gandasi Constituency for the last three years.

*Q.—664. Sri H. R. KESHAVA MURTHY (Gandasi).—

Will the Government be pleased to state :—

(*a*) the extent of land granted to the Scheduled Class people in Gandasi Constituency, for the last three years ;

(*b*) the number of persons to whom such lands have been granted ;

(*c*) average price fixed ;

(*d*) average assessment fixed per acre ?

A.—Sri M. V. KRISHNAPPA (Minister for Revenue).—

(*a*)

Acres	*Guntas*
4083	28

(*b*) 1022 persons.

(*c*) At Rs 15 to Rs. 18 in Channarayapatna Taluk and at Rs. 35 per acre in Arsikere Taluk.

(*d*) Rs. 1-75.

ಶ್ರೀ ಎಚ್. ಆರ್. ಕೇಶವಮೂರ್ತಿ.—ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಭೂಮಿಯನ್ನು ಕೊಟ್ಟಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಗಂಡಸಿ ಕ್ಷೇತ್ರಕ್ಕೆ ಸೇರಿದಂತೆ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ಎರಡು ತಾಲ್ಲೂಕುಗಳೂ ಸೇರಿವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇವರಲ್ಲಿ ಹಾಸನ ತಾಲ್ಲೂಕು ಬರುತ್ತದೆ. ಇದಕ್ಕೆ ಸೇರಿದ ದುದ್ದ ಹೋಬಳಿಯಲ್ಲಿ ಕೊಟ್ಟಿರುವ ಜಮೀನು ಎಷ್ಟಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಉತ್ತರದಲ್ಲಿ 4,083 ಎಕರೆ 28 ಗುಂಟಿಗಳು ಎಂದು ಹೇಳಿದೆ.

Sri SIDDIAH KASHIMATH.—How many acres of land are allotted to each person ?

ಶ್ರೀ ಎಂ. ವಿ. ಕೃಷ್ಣಪ್ಪ.—1022 ಜನಗಳಿಗೆ 4083 ಎಕರೆ ಎಂದಾದರೆ ಸುಮಾರು ಒಬ್ಬೊಬ್ಬರಿಗೆ 2-3 ಎಕರೆಗಳಷ್ಟು ಬರಬಹುದು. ಮಾನ್ಯ ಸದಸ್ಯರೇ ಇದನ್ನು ಲೆಕ್ಕ ಮಾಡಿಸಿಕೊಳ್ಳಬಹುದು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅಸೆಸ್‌ಮೆಂಟ್ ಒಂದು ರೂಪಾಯಿ 75 ನ. ಪೈ. ಎಂದ ಮೇಲೆ ಇದು ಬೇರೆ ಬೇರೆ ತಾಲ್ಲೂಕುಗಳಲ್ಲಿ ವ್ಯತ್ಯಾಸವಾಗಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮಗೇ ಗೊತ್ತಿರುವ ಹಾಗೆ ಭೂಮಿಯಲ್ಲಿ ಒಂದೇ ವರ್ಗವಿರುವುದಿಲ್ಲ. ಎರಡು ಮೂರು ತರಹ ಭೂಮಿಗಳು ಇರುತ್ತವೆ. ಅಲ್ಲದೆ ಬೆಲೆಯಲ್ಲಿ ಕೂಡ ಸ್ವಲ್ಪ ವ್ಯತ್ಯಾಸ ಇರುತ್ತದೆ. ಒಂದು ಜಾಗಕ್ಕಿಂತ ಇನ್ನೊಂದು ಜಾಗದಲ್ಲಿ ವ್ಯತ್ಯಾಸಗಳಿರುತ್ತವೆ. ಯೂನಿಫಾರಂ ಅಸೆಸುಮೆಂಟು ಎಂದು ಹೇಳುವುದಕ್ಕೆ ಆಗುವುದಿಲ್ಲ. ಡ್ರೈ ಏರಿಯಾಕ್ಕೆ ಒಂದು ರೀತಿ ಇದ್ದರೆ ಫರ್ಟೈಲ್ ಲ್ಯಾಂಡಿಗೇ ಒಂದು ತರಹದ ರೇಟಿರುತ್ತದೆ. ಯಾರು ಫರ್ಟೈಲ್ ಲ್ಯಾಂಡ್ ಪಡೆದಿರುತ್ತಾರೋ ಅವರು ಕಂದಾಯವನ್ನು ಕೊಡಲೇಬೇಕು.

ಶ್ರೀ ಕೆ. ಲಕ್ಕಪ್ಪ.—1,022 ಜನರಿಗೆ ಕೊಟ್ಟಿರುವ ಭೂಮಿಯಲ್ಲಿ ಯಾರಾದರೂ ಮಾರಿಕೊಂಡಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹರಿಜನರಿಗಾಗಿ ಜಮೀನು ಕೊಡುವಾಗ 15 ವರ್ಷಗಳಕಾಲ ಪರಭಾರೆ ಮಾಡಕೂಡದು ಎಂದಿದೆ. ಅದರಿಂದ ಮಾರಕೂಡದು ಎಂದಿದ್ದರೂ ಕೆಲವರು ನ್ಯಾಯವಾದ ಬೆಲೆ ಕೊಟ್ಟು ಜಮೀನು ಪಡೆದು ಅದನ್ನು ಮಾರಿಕೊಂಡಿದ್ದರೆ ನಾವೇನೂ ಅವರನ್ನು ಹಿಡಿಯುವುದಕ್ಕಾಗುವುದಿಲ್ಲ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಪ್ರಶ್ನೋತ್ತರಗಳ ಕನ್ನಡದ ಪಟ್ಟಿಗಳು ನಮಗಿನ್ನೂ ಕೊಡಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ನನಗೆ ಹಾಕಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಪೆಡ್ಡೂಲು ಕ್ಯಾಸ್ಟು ಜನಗಳಿಗಾಗಿ ಕೊಟ್ಟಿರುವ ಭೂಮಿಯ ಸಂಬಂಧದಲ್ಲಿ ಫೋಡೀ ಫೀಸು ಎಂದು ವಸೂಲು ಮಾಡಬೇಕೆಂದು ಸರಕಾರದವರೇನಾದರೂ ಆರ್ಡರು ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಫೋಡಿ ಫೀಸನ್ನು ಕೊಡಲೇಬೇಕು ಎಂದಿದೆ. ಅದನ್ನು ಮಾಫೀ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ನಂಜೇಗೌಡ.—ಪೆಡ್ಡೂಲು ಕ್ಯಾಸ್ಟು ಜನಕ್ಕಾಗಿ ಭೂಮಿ ಕೊಡುವಾಗ ಇಷ್ಟು ಬೆಲೆ ಎಂದು ನಿಗದಿ ಮಾಡಿಕೊಟ್ಟಿರುವಾಗ ಅವರು ಆ ಜಮೀನನ್ನು ಬೇರೆಯವರಿಗೆ ಮಾರುತ್ತಿದ್ದಾರೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕನ್ವೇಷನ್ಸ್ ಮೇಲೆ ಭೂಮಿಯನ್ನು ಸರಕಾರ ಕೊಟ್ಟಿದ್ದರೆ 15 ವರ್ಷಗಳ ಕಾಲ ಅದನ್ನು ಮಾರಕೂಡದು ಎಂದು ಇದೆ. ನ್ಯಾಯವಾದ ಬೆಲೆ ಕೊಟ್ಟು ಭೂಮಿಯನ್ನು ಪಡೆದಿದ್ದರೆ ಅದರ ಮೇಲೆ ಏನೂ ಮಾಡಲು ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಕಾನೂನು ಮಾಡಿಬಿಟ್ಟಿದ್ದೇವೆ, ಕೂಡಲೇ ಕೊಡಬೇಕು ಎಂದು ಅಪ್ಪಣೆ ಕೊಡಿಸಿದಿರಿ. ಆ ಹಣವನ್ನು ಸುಲಭ ಕಂತುಗಳಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

———